## ಕರ್ನಾಟಕ ಸರ್ಕಾರದ ನಡವಳಿಗಳು.

ವಿಷಯ: ಕೈಗಾರಿಕೆಗಳಿಗೆ ಮೂಲಭೂತ ಸೌಕರ್ಯ ಒದಗಿಸುವುದಕ್ಕಾಗಿ ವಿಶೇಷ ಒತ್ತು ನೀಡಲು ವಿವಿಧ ಸಂಸ್ಥೆಗಳಿಗೆ ಸಹಾಯ ನೀಡುವ ಯೋಜನೆಯನ್ನು ಅನುಮೋದಿಸುವ ಬಗ್ಗೆ.

ಓದಲಾಗಿದೆ: 1. ಆಯುಕ್ತರು, ಕೈಗಾರಿಕಾಭಿವೃದ್ಧಿ, ಇವರ ಪತ್ರ ಸಂ: ಕೈವಾಇ/ಕೈಅ/ಇ1/ 283/2014-15, ದಿನಾಂಕ: 07.05.2015 ಮತ್ತು 13.08.2015.

2. ಸರ್ಕಾರಿ ಆದೇಶ ಸಂ: ಸಿಐ 152 ಎಸ್‌ಪಿಐ 2013, ದಿ: 20.09.2013.

******

### ಪ್ರಸ್ತಾವನೆ:

2015-16ನೇ ಸಾಲಿನ ಆಯವ್ಯಯದ ಭಾಷಣದಲ್ಲಿ ಕಂಡಿಕೆ-409ರ "2015-16ನೇ ಸಾಲಿನಲ್ಲಿ ಕೆ.ಐ.ಎ.ಡಿ.ಬಿ./ಕೆ.ಎಸ್.ಎಸ್.ಐ.ಡಿ.ಸಿ/ ಸಹಕಾರ ಸಂಘಗಳು ಅಭಿವೃದ್ಧಿಪಡಿಸಿದ ಹಾಲಿ ಇರುವ ಕೈಗಾರಿಕಾ ಪ್ರದೇಶಗಳನ್ನು / ಎಸ್ಟೇಟುಗಳನ್ನು ಮೇಲ್ದರ್ಜೆಗೇರಿಸಲು ಮತ್ತು ಹೊಸ ಕೈಗಾರಿಕಾ ಪ್ರದೇಶಗಳಲ್ಲಿ/ ಎಸ್ಟೇಟುಗಳಲ್ಲಿ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ರೂ. 100.00 ಕೋಟಿಗಳ ಅನುದಾನವನ್ನು ಒದಗಿಸಲಾಗಿದೆ ಎಂದು ಘೋಷಿಸಲಾಗಿದೆ".

ಅದರಂತೆ, ಆಯುಕ್ತರು, ಕೈಗಾರಿಕಾಭಿವೃದ್ಧಿ ಇವರು ಮೇಲೆ ಓದಲಾದ ಕ್ರಮಾಂಕ(1)ರ ವಿವಿಧ ದಿನಾಂಕಗಳ ಪತ್ರಗಳಲ್ಲಿ ಪ್ರಸ್ತಾವನೆಯನ್ನು ಮತ್ತು ಈ ಯೋಜನೆಗೆ ಮಾರ್ಗಸೂಚಿಗಳನ್ನು ಸರ್ಕಾರಕ್ಕೆ ಸಲ್ಲಿಸಿ, ಕೆ.ಎಸ್.ಎಸ್.ಐ.ಡಿ.ಸಿ. / ಕೆ.ಐ.ಎ.ಡಿ.ಬಿ. / ಸಹಕಾರ ಸಂಘಗಳು ಹಾಲಿ ಅಸ್ತಿತ್ವದಲ್ಲಿರುವ ಕೈಗಾರಿಕಾ ಪ್ರದೇಶ / ವಸಾಹತುಗಳಲ್ಲಿನ ಮೂಲಭೂತ ಸೌಕರ್ಯಗಳ ಉನ್ನತೀಕರಣಕ್ಕಾಗಿ ಓದಲಾದ ಕ್ರಮಾಂಕ (2)ರ ಆದೇಶದಲ್ಲಿ ಈಗಾಗಲೇ ಯೋಜನೆ / ಮಾರ್ಗಸೂಚಿಗಳನ್ನು ರೂಪಿಸಲಾಗಿದೆ ಎಂದು ತಿಳಿಸುತ್ತಾ, ಈ ಮಾರ್ಗಸೂಚಿಗಳಲ್ಲಿಯೇ ಅಗತ್ಯ ಮಾರ್ಪಾಡುಗಳನ್ನು ಮಾಡಿ ಕೆ.ಎಸ್.ಎಸ್.ಐ.ಡಿ.ಸಿ. ಮತ್ತು ಕೆ.ಐ.ಎ.ಡಿ.ಬಿ. ಸಂಸ್ಥೆಗಳು ಹೊಸದಾಗಿ ಅಭಿವೃದ್ಧಿಪಡಿಸುವ ಕೈಗಾರಿಕಾ ವಸಾಹತು / ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಯೋಜನೆಯನ್ನು ಅನುಷ್ಠಾನಗೊಳಿಸಬಹುದಾಗಿರುತ್ತದೆ ಎಂದು ತಿಳಿಸುತ್ತಾ, ಯೋಜನೆಯ ಮಾರ್ಗಸೂಚಿಗಳಿಗೆ ಸೂಕ್ತ ತಿದ್ದುಪಡಿ ಮಾಡಿ ಸರ್ಕಾರದಿಂದ ನೀಡಬೇಕಾದ ಅನುದಾನವನ್ನು "ಕೈಗಾರಿಕೆಗಳಿಗೆ ಮೂಲಭೂತ ಸೌಕರ್ಯ" ಯೋಜನೆಯ ಲೆಕ್ಕಶೀರ್ಷಿಕೆ 4852-80-004-0-01-211 ರಡಿ ಭರಿಸಲು ಸರ್ಕಾರದ ಅನುಮೋದನೆಯನ್ನು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

### ಸರ್ಕಾರಿ ಆದೇಶ ಸಂಖ್ಯೆ: ಸಿಐ 145 ಸಿಎಸ್‌ಸಿ 2015, ಬೆಂಗಳೂರು, ದಿನಾಂಕ: 15.12.2015

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ / ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ / ಸಹಕಾರ ಸಂಘ / ಎಸ್‌ಪಿವಿ ಗಳು ಈಗಾಗಲೇ ಅಸ್ತಿತ್ವದಲ್ಲಿರುವ ಕೈಗಾರಿಕಾ ವಸಾಹತು / ಪ್ರದೇಶಗಳಲ್ಲಿನ ಮೂಲಭೂತ ಸೌಕರ್ಯಗಳನ್ನು ಉನ್ನತೀಕರಿಸಲು ಹಾಗೂ ಕೆ.ಎಸ್.ಎಸ್.ಐ.ಡಿ.ಸಿ. / ಕೆ.ಐ.ಎ.ಡಿ.ಬಿ. ಸಂಸ್ಥೆಗಳು

ಹೊಸದಾಗಿ ಅಭಿವೃದ್ಧಿಪಡಿಸುವ ಕೈಗಾರಿಕಾ ವಸಾಹತು / ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು, ತಗಲುವ ವೆಚ್ಚವನ್ನು "ವೆಚ್ಚ ಹಂಚಿಕೆ ಮಾದರಿ" (Cost Sharing Model) ಯಲ್ಲಿ ಸರ್ಕಾರದಿಂದ ಭರಿಸುವ ಯೋಜನೆಯನ್ನು ಈ ಆದೇಶದ ಅನುಬಂಧದಲ್ಲಿರುವ ಮಾರ್ಗಸೂಚಿಗಳಂತೆ ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿದೆ.

ಹಾಲಿ ಅಭಿವೃದ್ಧಿಪಡಿಸಲಾಗಿರುವ ಕೈಗಾರಿಕಾ ಪ್ರದೇಶ / ವಸಾಹತುಗಳ ಮೂಲಭೂತ ಸೌಕರ್ಯಗಳ ಉನ್ನತೀಕರಣಕ್ಕಾಗಿ ಸರ್ಕಾರದ ಆದೇಶ ಸಂಖ್ಯೆ: ಸಿಐ 153 ಎಸ್‌ಪಿಐ 2013, ದಿನಾಂಕ: 20.09.2013ರಲ್ಲಿ ಜಾರಿಗೊಳಿಸಿರುವ ಯೋಜನೆ / ಮಾರ್ಗಸೂಚಿಗಳನ್ನು ಹಿಂಪಡೆಯಲಾಗಿದೆ.

ಸರ್ಕಾರದಿಂದ ಆಯವ್ಯಯದ ಲಭ್ಯತೆಯ ಮೇಲೆ ಅವಶ್ಯವಿರುವ ಅನುದಾನವನ್ನು "ಕೈಗಾರಿಕೆಗಳಿಗೆ ಮೂಲಭೂತ ಸೌಕರ್ಯ" ಯೋಜನೆಯ ಲೆಕ್ಕಶೀರ್ಷಿಕೆ 4852-80-004-0-01-211 ರಡಿ ಭರಿಸಲಾಗುವುದು.

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂ: ಪಿಡಿ 36 ಎಫ್‌ಆರ್‌ಓ 2015, ದಿ: 29.05.2015 ಮತ್ತು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ: ಎಫ್‌ಡಿ 1127 ವೆಚ್ಚ-1 2015, ದಿ: 11.12.2015ರಲ್ಲಿ ನೀಡಲಾಗಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

15.12.2015

[ಎಲ್.ಎಸ್. ಶ್ರೀಕಂಠಬಾಬು]
ಸರ್ಕಾರದ ಅಧೀನ ಕಾರ್ಯದರ್ಶಿ [ಸಪ್ರಕೈ],
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು – ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕೋರಿ ಕಳುಹಿಸಲಾಗಿದೆ. ತದನಂತರ, ಪ್ರಕಟಗೊಂಡ ಸಂಚಿಕೆಗಳ 25 ಪ್ರತಿಗಳನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಕೋರಲಾಗಿದೆ.

ಪ್ರತಿಯನ್ನು:

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್‌ಎಸ್‌ಎ) ಕರ್ನಾಟಕ, ಹೊಸ ಕಟ್ಟಡ, 'ಆಡಿಟ್ ಭವನ', ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು – 560001.
2. ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ) ಕರ್ನಾಟಕ, ಹೊಸ ಕಟ್ಟಡ, 'ಆಡಿಟ್ ಭವನ', ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು – 560001.
3. ಪ್ರಧಾನ ಮಹಾಲೇಖಪಾಲರು (ಎ &ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು – 560001.

4. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
7. ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–1.
8. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು–10.
9. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಕಾರ್ಯ ನಿರ್ವಾಹಕ ಸದಸ್ಯರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆ.ಐ.ಎ.ಡಿ.ಬಿ.) ರಾಷ್ಟ್ರೋತ್ಥಾನ ಪರಿಷತ್ ಭವನ, ನೃಪತುಂಗ ರಸ್ತೆ, ಬೆಂಗಳೂರು–01.
10. ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
11. ಮಾನ್ಯ ಸಣ್ಣ ಕೈಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
12. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
13. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
14. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ–1) ವಿಧಾನಸೌಧ, ಬೆಂಗಳೂರು
15. ಹಿರಿಯ ನಿರ್ದೇಶಕರು (ಪಿಎಫ್ಆರ್), ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
16. ಸರ್ಕಾರದ ಅಧೀನ ಕಾರ್ಯದರ್ಶಿ (ಸಮನ್ವಯ) ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
17. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

# Annexure to Govt., Order No. CI 145 CSC 2015, dated: 15.12.2015

## Modified Guidelines for the Scheme for supporting Critical Industrial Infrastructure Development of existing and New Industrial Area/ Estates in the State

**Introduction**

1. The State Government vide Government Order No. CI 152 SPI 2013 Dated: 20.09.2013 has issued the guidelines for up-gradation of the infrastructure facilities in existing KIADB/ KSSIDC Industrial Area/Estate, where it is difficult to mobilize funds from the existing industrial units for improvements in industrial area/estate.

2. KIADB/KSSIDC are developing industrial area/estate in the State and to attract the investment to the State, it is necessary to provide land at reasonable cost with all necessary infrastructural facilities like approach road, internal roads, water supply, power infrastructure, drainage etc.

3. In order to provide good infrastructure facilities in existing and new industrial area/estate, the KIADB/KSSIDC have to be supported with Budgetary Provision.

4. In this context, the Budget announcement has been made during 2015-16 as below:

   " *It is proposed to upgrade the existing Industrial area / estates developed by KIADB / KSSIDC / Co-operative Societies and to develop the infrastructure facilities in New Industrial Area / Estates and a grant of Rs. 100 Crore is provided for this purpose during 2015-16*".

5. Funds will be provided for this scheme under Industrial Infrastructure for Institutions Investment Head of Account 4852-80-004-0-01 (211)- Investment.

6. **Critical Industrial Infrastructure Development Scheme for existing KIADB / KSSIDC / Co-operative Societies Industrial Areas/Estates:**

a) KIADB/KSSIDC/SPV's/Co-operative Societies will be the implementing agencies for existing industrial area/estate.

b) The implementing agencies shall bring in minimum 25% matching share from their own resources. Existing industrialists in industrial area/estate are also to share the infrastructure up-gradation cost.

c) Financial support will be in the form of investment up to 75% of the project cost, on case to case basis from the Government.

d) KIADB/KSSIDC/SPV's/Co-operative Societies shall identify existing industrial areas/estates in the State, where critical infrastructure such as approach road, internal roads, water supply system, power infrastructure, e-connectivity etc., need to be provided on priority basis in consultation with the Joint Director, District Industries Centre.

e) KIADB/KSSIDC to prepare line estimates and place before the Committee constituted under the Chairmanship of Commissioner for Industrial Development with CEO, KIADB, MD, KSSIDC, CDO, KIADB, CE, KSSIDC, Additional Director (MSME) & Joint Director (ID) as members for in-principle approval.

f) Once the project gets in-principle approval, KIADB/KSSIDC to submit the detailed proposal to Commissioner for Industrial Development and Director of Industries & Commerce for final approval.

g) Commissioner for Industrial Development and Director of Industries & Commerce has to submit proposals for approval and release of funds to the Government.

h) Implementing Agency shall follow the procedures as per KTPP Act and implement the projects. Funds will be released in stages depending on the progress achieved.

## 7. Infrastructure Development Scheme for new KIADB / KSSIDC Industrial Areas/Estates

a) KIADB/KSSIDC shall identify new industrial areas/estates in the State, in consultation with Commissioner for Industrial Development and Director of Industries & Commerce, wherever the assistance is required from the Government.

b) The implementing agencies shall bear the infrastructure cost from their own resources. However, KIADB/KSSIDC shall take up the developmental/infrastructure works through the cost sharing model by charging the amount for development/ infrastructure to the allottees after adjusting the assistance received from the Government, based on the budgetary provisions.

c) KIADB/KSSIDC to prepare line estimates and place before the Committee constituted under the Chairmanship of Commissioner for Industrial Development with CEO, KIADB, MD, KSSIDC, CDO, KIADB, CE, KSSIDC, Additional Director (MSME) & Joint Director (ID) as members for in-principle approval. In-Principle approval may be given depending on the availability of funds from the Government.

d) Once the project gets in-principle approval, KIADB/KSSIDC to submit the detailed proposal to Commissioner for Industrial Development and Director of Industries & Commerce for final approval.

e) Commissioner for Industrial Development and Director of Industries & Commerce has to submit proposals for approval and release of funds to the Government.

f) Implementing Agency shall follow the procedures as per KTPP Act and implement the projects. Funds will be released in stages depending on the progress achieved.

15.12.2015

(L.S. SRIKANTABABU)
Under Secretary to Government, (SSI)
Commerce & Industries Department

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕೈಗಾರಿಕೆಗಳಿಗೆ ಮೂಲಭೂತ ಸೌಕರ್ಯ ಒದಗಿಸುವುದಕ್ಕಾಗಿ ವಿಶೇಷ ಒತ್ತು ನೀಡಲು ವಿವಿಧ ಸಂಸ್ಥೆಗಳಿಗೆ ಸಹಾಯ ನೀಡುವ ಯೋಜನೆಯನ್ನು ಅನುಮೋದಿಸುವ ಬಗ್ಗೆ.

ಓದಲಾಗಿದೆ: ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರ ಪ್ರಸ್ತಾವನೆ ದಿನಾಂಕ: 14.08.2013.

-:O:-

**ಪ್ರಸ್ತಾವನೆ:**

2013-14ನೇ ಸಾಲಿನ ಆಯವ್ಯಯದಲ್ಲಿ ಕೈಗಾರಿಕಾ ಮೂಲಭೂತ ಸೌಕರ್ಯ ಒದಗಿಸಲು ಲೆಕ್ಕಶೀರ್ಷಿಕೆ 4852-80-004-0-01 ಬಂಡವಾಳ ಹೂಡಿಕೆ-211 ಅಡಿಯಲ್ಲಿ ಒಟ್ಟು ರೂ.59.66 ಕೋಟಿಗಳನ್ನು ಒದಗಿಸಲಾಗಿದ್ದು, ಇದರಲ್ಲಿ ಕೈಗಾರಿಕೆಗಳಿಗೆ ಅಗತ್ಯವಿರುವ ಕೈಗಾರಿಕಾ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಸಲುವಾಗಿ (critical infrastructure development in the State) ರೂ.29.66 ಕೋಟಿಗಳನ್ನು ಕಾಯ್ದಿರಿಸಲು ಪ್ರಸ್ತಾಪಿಸಲಾಗಿದೆ.

ಮೇಲೆ ಓದಲಾದ ಪತ್ರದಲ್ಲಿ, ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ರವರು ಕೈಗಾರಿಕಾ ಮೂಲಭೂತ ಸೌಕರ್ಯ ಒದಗಿಸುವ ಯೋಜನೆಗೆ ಸಂಬಂಧಿಸಿದಂತೆ, ರೂಪುರೇಷೆಗಳನ್ನು ನಿಗದಿತ ನಮೂನೆಯಲ್ಲಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿ, ಯೋಜನೆಯ ಅನುಷ್ಠಾನಕ್ಕೆ ತಾತ್ವಿಕ ಅನುಮೋದನೆ ನೀಡಲು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ: ಸಿಐ 152 ಎಸ್‌ಪಿಐ 2013, ಬೆಂಗಳೂರು, ದಿನಾಂಕ: 20-09-2013**

ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ರವರ ಶಿಫಾರಸ್ಸಿನಂತೆ, ಕೈಗಾರಿಕೆಗಳಿಗೆ ಅಗತ್ಯವಿರುವ ಕೈಗಾರಿಕಾ ಮೂಲಭೂತ ಸೌಕರ್ಯಗಳನ್ನು (critical infrastructure development in the State) ಕೆಐಎಡಿಬಿ/ಕೆಎಸ್‌ಎಸ್‌ಐಡಿಸಿ ಮತ್ತು ಎಸ್‌ಪಿವಿ ಗಳ ಮೂಲಕ ಅಭಿವೃದ್ಧಿಪಡಿಸುವ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರವು "ತಾತ್ವಿಕ" ಅನುಮೋದನೆಯನ್ನು ನೀಡಿದೆ. ಯೋಜನೆಯ ರೂಪುರೇಷೆಗಳನ್ನು ಅನುಬಂಧಿಸಿದೆ.

2013-14ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ 4852-80-004-0-01-211 ಅಡಿಯಲ್ಲಿ ಒದಗಿಸಿರುವ ರೂ.59.66 ಕೋಟಿಗಳ ಪೈಕಿ ರೂ.29.66 ಕೋಟಿಗಳನ್ನು ಪ್ರಸ್ತುತ ಯೋಜನೆಗೆ ಮೀಸಲಿಡಲಾಗಿದೆ.

ಕೈಗಾರಿಕಾಭಿವೃದ್ಧಿ ಆಯುಕ್ತರು ಅರ್ಹ ಪ್ರಸ್ತಾವನೆಗಳನ್ನು ಗುರುತಿಸಿ, ಯೋಜನೆಯಲ್ಲಿ ತಿಳಿಸಿರುವ ಮಾರ್ಗಸೂಚಿ ಮೇರೆಗೆ ಅನುಷ್ಠಾನಗೊಳಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: FD 912/911/918/883/Exp/1/2013, ದಿನಾಂಕ: 26.08.2013 ಹಾಗೂ ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿ 38 ಎಫ್ಆರ್ಓ 2013, ದಿನಾಂಕ: 22.08.2013 ರ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ.ಆರ್. ಚಂದ್ರಮ್ಮ)
ಪೀಠಾಧಿಕಾರಿ (ತಾಂತ್ರಿಕ ಕೋಶ) (ಪ್ರಭಾರ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

**ಇವರಿಗೆ,**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು, ಇವರಿಗೆ ಮುಂದಿನ ವಿಶೇಷ ಗೆಜೆಟ್‌ನಲ್ಲಿ ಪ್ರಕಟಿಸುವಂತೆ ಕೋರಿಕೆಯೊಂದಿಗೆ.

1. ಮಹಾಲೇಖಪಾಲರು (ಲೆಕ್ಕಪತ್ರ), ಕರ್ನಾಟಕ, ಬೆಂಗಳೂರು-1.
2. ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-1.
3. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಕಾರ್ಯನಿರ್ವಾಹಕ ಸದಸ್ಯರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, 14/3ಎ, ಆರ್.ಪಿ. ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು-01.
4. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ, ರಾಜಾಜಿನಗರ ಕೈಗಾರಿಕಾ ವಸಾಹತು, ಬೆಂಗಳೂರು.
5. ನಿರ್ದೇಶಕರು (ತಾಂತ್ರಿಕ ಕೋಶ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು-1.
6. ನಿರ್ದೇಶಕರು, ಕರ್ನಾಟಕ ರಾಜ್ಯ ಹುಜೂರ್ ಖಜಾನೆ, ಬೆಂಗಳೂರು-1.
7. ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ ಸರ್ಕಾರದ ಉಪ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು-1.
8. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ವೆಚ್ಚ-I), ವಿಧಾನಸೌಧ, ಬೆಂಗಳೂರು-1.
9. ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಆಪ್ತ ಕಾರ್ಯದರ್ಶಿಗಳು.
10. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಉದ್ಯೋಗ ಮಿತ್ರ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-1.
11. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಸಹಾಯಕರು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು-1.
12. ಜಂಟಿ ನಿರ್ದೇಶಕರು (ಯೋಜನೆ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-1.
13. ಜಂಟಿ ನಿರ್ದೇಶಕರು (ಕೈಗಾರಿಕಾಭಿವೃದ್ಧಿ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-1.
14. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ತಾಂತ್ರಿಕ ಉನ್ನತೀಕರಣ ಪರಿಷತ್ತು, 4ನೇ ಮಹಡಿ, ಬಸವ ಭವನ, ಬಸವೇಶ್ವರ ವೃತ್ತ, ಬೆಂಗಳೂರು-01.
15. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

## Annexure to Govt. Order No. CI 152 SPI 2013, dated:20-09-2013

# Scheme for supporting Critical Industrial Infrastructure Development in the State

**Introduction:**

1. The State Govt., for speedy, balanced and sustainable industrial growth in the State is implementing Industrial Policies right from 1969. Presently, 2009-14 Industrial Policy is in force and in order to achieve the vision and mission statement of the policy several strategies are suggested in the policy. Providing World Quality Infrastructure facilities to attract investors to the State, is one of the important strategy, indicated in the policy. The Govt., has already initiated various measures in this direction viz., establishment of Land Bank, development of Sector Specific Zones/ Parks, supply of treated sewerage water, construction of UGD & CETP, providing approach roads to Industrial Areas / Estates, upgradation of critical infrastructure in the existing areas etc.
2. As explained above, majority of existing areas/estates are lacking these facilities. As the majority of the industrial units have obtained absolute sale deeds, it is difficult to mobilise funds from the existing industrial units. However, in line with the directions issued from Lok Adalath and also in view of the necessity, it is inevitable to provide the above facilities to the extent possible. In order to provide these facilities, the KIADB/KSSIDC have to be supported with budgetary provision. Besides, as indicated in the Industrial Policy, there is a need to support for development of Private Industrial Areas/ Layouts on PPP model.
3. Out of the total budgetary provision of Rs.59.66 crore available under "Industrial Infrastructure Support for Institutions" (Head of A/c 4852-80-004-0-01- Investment-211) for the year 2013-14, an amount of Rs.29.66 crore will be utilized for this purpose.

4. **IMEPLEMENTING AGENCY**
   a) KIADB/KSSIDC/SPVs will be the implementing agencies.
   b) The implementing agencies shall bring in matching share from their own resources.

## 5. TYPE of SUPPORT & LIMIT

Financial support will be in the form of investment up to 75% of the project cost, for capital costs only, on a case to case basis.

## 6. METHODOLOGY FOR SELECTION OF THE PROJECT.

a) KIADB/KSSIDC/SPVs shall identify 10 Industrial Areas in the State, where critical infrastructure such as approach road, internal roads, water supply system, power distribution network, e-connectivity etc., need to be provided/strengthened on priority basis in consultation with the Joint Director, District Industries Centres.

b) KIADB/KSSIDC to prepare line estimates and place before the Committee under the Chairmanship of the Commissioner for Industrial Development with CEO, KIADB, CDO, KIADB, Joint Director(ID), Additional Director(MSME), Additional Director (Viswa) and Director, MSME Development Institute, as members for getting in principle approval.

c) KIADB/KSSIDC shall agree to share the project cost.

d) Once the project gets in principle approval, KIADB/KSSIDC to submit the detailed proposal to Commissioner for Industrial Development and Director of Industries & Commerce, for final approval.

e) The Commissioner shall have powers to approve the proposals upto Rs. 100 lakhs, Principal Secretary to Govt., will approve upto Rs. 500 lakhs and above Rs.500 lakhs, Cabinet as per existing Rules under Transaction of Business Rules, 1977.

f) KIADB/KSSIDC shall follow the procedure as per KTPP Act and implement the infrastructure improvement projects. Funds will be released in stages depending on the progress achieved.

g) Private Industrial Layouts Policy / Guidelines will be issued separately in respect of the proposals pertaining to SPVs.

(K.R. Chandramma)
Desk Officer (Technical Cell) (I/c)
Commerce & Industries Dept.